सरयू
# ಸರಯೂ
ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly | April 2014 | Vol. :1 | Issue : 2 | 5116/ಜಯ ಸಂ | ಚೈತ್ರ/ ಎಪ್ರಿಲ್ 2014 | ಪುಟಗಳು : 8

## ದೀಪಪ್ರದಾನ

ಅಂತಿಮ ತರಗತಿಯ ವಿದ್ಯಾರ್ಥಿಗಳು ಇದುವರೆಗೆ ತಾವು ನಿರ್ವಹಿಸುತ್ತಿದ್ದ ಜವಾಬ್ದಾರಿಗಳನ್ನು ದೀಪ ಹಸ್ತಾಂತರಿಸುವ ಮೂಲಕ ಕಿರಿಯ ವಿದ್ಯಾರ್ಥಿಗಳಿಗೆ ನೀಡಿ ಹಿರಿಯರ ಆಶೀರ್ವಾದ, ಮಾರ್ಗದರ್ಶನಗಳೊಂದಿಗೆ ಮುಂದಿನ ಜೀವನಕ್ಕೆ ಹೊಸಚೈತನ್ಯ, ಹುರುಪಿನೊಂದಿಗೆ ಕಾಲಿಡುವ ದಿನ.

### ಪ್ರೌಢಶಾಲಾ ವಿಭಾಗ 11-3-2014






“ಭಾರತದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ ಹಿಂದೂ ಧರ್ಮದಲ್ಲಿರುವ ಸತ್ವ, ಸಂಸ್ಕೃತಿ ಪ್ರತಿಯೊಬ್ಬನಲ್ಲಿಯೂ ಸುಪ್ತವಾಗಿದೆ. ಕಾಮನ ಬಿಲ್ಲಿನ ಬಣ್ಣದಂತೆ ಸಂಸ್ಕೃತಿಯ ವೈವಿಧ್ಯತೆ ಇದ್ದರೂ ರಾಷ್ಟ್ರೀಯ ಭಾವ ಒಂದೇ ಆಗಿದೆ.

ಶಕ್ತಿಶಾಲಿ ರಾಷ್ಟ್ರ ನಿರ್ಮಾಣಕ್ಕೆ ಅವಶ್ಯವಾದ ಸ್ವಾಭಿಮಾನದ ಮಾನವೀಯ ಗುಣಗಳ ನಿರ್ಮಾಣ ಮಾಡುವ ಶಿಕ್ಷಣ ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದಲ್ಲಿ ಸಿಗುತ್ತಿರುವುದು ಸಂತಸ ತಂದಿದೆ.”

**ವಂ। ಶಾಂತಕುಮಾರಿ**
ರಾಷ್ಟ್ರ ಸೇವಿಕಾ ಸಮಿತಿಯ ಅಖಿಲ ಭಾರತ ಪ್ರಮುಖ ಸಂಚಾಲಿಕಾ



“ಶಿಕ್ಷಣದ ಜತೆಜತೆಗೆ ಪ್ರಸ್ತುತ ಸಮಾಜದ ಸವಾಲುಗಳನ್ನು ಎದುರಿಸುವ ಶಕ್ತಿ-ಸಾಮರ್ಥ್ಯಗಳನ್ನು ಯುವ ಸಮುದಾಯ ಮೈಗೂಡಿಸಿಕೊಂಡು ಆ ಮೂಲಕ ರಾಷ್ಟ್ರಕಾರ್ಯದಲ್ಲೂ ತೊಡಗಿಸಿಕೊಳ್ಳಬೇಕು.

ನಮ್ಮ ದೇಶ ನಮಗೆ ಕೇವಲ ಭೌಗೋಳಿಕ ಸಂಪತ್ತು ಮಾತ್ರವೇ ಆಗಿರದೆ ಅದು ನಮ್ಮ ತಾಯಿ. ಆ ತಾಯಿಯ ಸೇವೆ ಮಾಡಲು ನಾವು ಹೆಮ್ಮೆಪಡಬೇಕು.”

**ನಿಕೇತ್‌ರಾಜ್ ಬೆಂಗಳೂರು**
ರಾಜ್ಯಾಧ್ಯಕ್ಷರು, ಸ್ವಾಭಿಮಾನಿ ಟ್ರಸ್ಟ್

(ವರದಿ 5ನೇ ಪುಟದಲ್ಲಿ)

### ಪದವಿಪೂರ್ವ ವಿಭಾಗ 6-3-2014




ಈ ಸಮಾರಂಭದಲ್ಲಿ ಸಂಸ್ಥೆಯ ಸಂಚಾಲಕ ಡಾ। ಪ್ರಭಾಕರ ಭಟ್ ಕಲ್ಲಡ್ಕ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಅಥವಾ ಅದಕ್ಕೂ ಹೆಚ್ಚು ವರ್ಷ ಇಲ್ಲಿ ವಿದ್ಯಾರ್ಜನೆ ಮಾಡಿ, ಸದ್ವಿಚಾರಗಳನ್ನು ಮೈಗೂಡಿಸಿಕೊಂಡಿರುವ ತಾವು ಮುಂದೆಯೂ ಅದನ್ನು ಉಳಿಸಿಕೊಂಡು ಬೆಳೆಸುವ ಕಾರ್ಯ ಮಾಡಬೇಕು. ಆ ಮೂಲಕ ಸಮಾಜದಲ್ಲಿ ಔನ್ನತ್ಯವನ್ನು ಕಾಣಬೇಕು. ಸತ್ಪ್ರಜೆಗಳಾಗಿ ಬಾಳಬೇಕು ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

“ವಿದ್ಯಾರ್ಜನೆಯ ಜೊತೆಗೆ ನಾವು ಈ ದೇಶದ ಸಂಪತ್ತು ಎಂದು ಅರಿತುಕೊಂಡಲ್ಲಿ ಮಹತ್ತರವಾದ ಬದಲಾವಣೆಯನ್ನು ನಿರೀಕ್ಷಿಸಬಹುದು. ಜ್ಞಾನವು ನಿಂತ ನೀರಾಗಿರದೆ ಅದರಿಂದ ಸಮಾಜಕ್ಕೆ ಉಪಯೋಗವಾಗುವ ರೀತಿಯಲ್ಲಿ ಚಿಂತಿಸುವ ಅಗತ್ಯವಿದೆ.

ವ್ಯಕ್ತಿ ಸ್ವಾತಂತ್ರ್ಯ ಪ್ರತಿಯೊಬ್ಬನಿಗೂ ಇದ್ದೇ ಇದೆ ಆದರೆ ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ಜ್ಞಾನ ನಮ್ಮಲ್ಲಿರಬೇಕು.”



**ಪ್ರೊ। ಬಾಬುನಾರಾಯಣ**
ಎನ್‌ಐಟಿಕೆ ಸುರತ್ಕಲ್

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮಗಾದ ಅನುಭವಗಳನ್ನು ಹಂಚಿಕೊಂಡರು. ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ, ಡಾ। ಕಮಲಾ ಪ್ರಭಾಕರ ಭಟ್ ಉಪಸ್ಥಿತರಿದ್ದರು.

ಪ್ರಾಚಾರ್ಯ ಕೃಷ್ಣಪ್ರಸಾದ ಸ್ವಾಗತಿಸಿ, ವಿದ್ಯಾರ್ಥಿನಿ ಇಂಧುಶ್ರೀ ವಂದಿಸಿ, ಸ್ವಾತಿ ಆಚಾರ್ಯ ನಿರೂಪಿಸಿದರು.

## ಪರ್ವಕಾಲ

ಜಯ ಸಂವತ್ಸರದ ಶುಭ ಸಂದರ್ಭದಲ್ಲಿ ದೇಶವೇ ಒಂದು ಬದಲಾವಣೆಯ ನಿರೀಕ್ಷೆಯಲ್ಲಿದೆ. ಅನೀತಿ, ಅನಾಚಾರ, ಅಧರ್ಮಗಳು ಕೊನೆಗೊಂಡು ಹೊಸ ಶಕೆಯನ್ನು ಎದುರುನೋಡುವ ತವಕ ಎಲ್ಲರದು.

ನಿರೀಕ್ಷೆ ಹುಸಿಯಾಗದಿರಲಿ, ಬಾಯಿಮಾತಿನ ರಾಮರಾಜ್ಯದ ಕಲ್ಪನೆ ಸಾಕಾರಗೊಳ್ಳಲಿ. ಎಲ್ಲೆಲ್ಲೂ ಸದ್ವಿಚಾರ ಸತ್ ಚಿಂತನೆಗಳು ಹರಿದಾಡಿ ಶಕ್ತಿಶಾಲಿ ಭಾರತ ಮತ್ತೆ ಎದ್ದುನಿಲ್ಲಲಿ.

ವಿದ್ಯಾರ್ಥಿಗಳಿಗೆ ಇದೊಂದು ಪರ್ವಕಾಲ. ಶಾಲಾ ದಿನಗಳು ಮುಗಿದು ಇನ್ನೇನು ರಜೆಯ ಸವಿಯನ್ನು ಅನುಭವಿಸುತ್ತಿರುವ ಸಮಯ. ಕಾಲದ ಮಹತ್ವವನ್ನರಿತು ಪ್ರತಿಕ್ಷಣದಲ್ಲೂ ಹೊಸತನದೆಡೆಗೆ ಚಿಂತನೆಗಳು ಸಾಗುತ್ತಿರಲಿ.

ಬೇಸಿಗೆಯ ರಜಾದಿನಗಳ ಉಪಯೋಗ ಪಡಕೊಳ್ಳಲು ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಮಕ್ಕಳ ವಿಕಸನದಲ್ಲಿ ಹೆತ್ತವರ ಜವಾಬ್ದಾರಿಗಳು ಕೂಡಾ ಮಹತ್ವದ್ದಾಗಿರುತ್ತದೆ. ಅದಕ್ಕಾಗಿ ಈ ಸಂಚಿಕೆಯಲ್ಲಿ ಹಿರಿಯರು ಗಮನಿಸಬೇಕಾದ ಸಂಗತಿಗಳ ಕುರಿತು ಚಿಕ್ಕ ಲೇಖನವನ್ನು ನೀಡಲಾಗಿದ್ದು ಈ ಅಂಶಗಳು ತಮಗೆ ಮೆಚ್ಚುಗೆಯಾಗುವವು ಎಂಬ ಕಲ್ಪನೆ ನಮ್ಮದು.

**ಸಂಪಾದಕ ಮಂಡಳಿ**

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ

**ಕಾರ್ಯನಿರ್ವಾಹಕ ಸಂಪಾದಕರು :**
ಮಹೇಶ ನೆಟ್ಲ

**ಸಹಸಂಪಾದಕರು :**
ದಿವ್ಯಾಕುಮಾರಿ
ಸುಮಿತ್ರಾ ಎಸ್.ಜಿ.,
ಅನಿತಾ
ಜ್ಯೋತಿ
ಜಯಾನಂದ ಪೆರಾಜೆ
ಶ್ರೀಮತಿ ವಿನುತ ಎಸ್.ಎನ್.

**ವ್ಯವಸ್ಥಾಪಕ ಸಂಪಾದಕರು :**
ಸತೀಶ ಭಟ್, ಶಿವಗಿರಿ

**ವಿನ್ಯಾಸ :**
ಕುಶಾಲಪ್ಪ ಅಮ್ಟೂರು

ಚಿಂತನರಶ್ಮಿ

## ಭಾಮತಿ

ವಾಚಸ್ಪತಿ ಮಿಶ್ರರು ದೊಡ್ಡ ವಿದ್ವಾಂಸರು. ಸಂಸ್ಕೃತದಲ್ಲಿ **'ಭಾಮತಿ'** ಎಂಬ ಗ್ರಂಥ ಬರೆದಿದ್ದಾರೆ. ಭಾಮತಿ, ಅವರ ಹೆಂಡತಿಯ ಹೆಸರೂ ಹೌದು.

ವಾಚಸ್ಪತಿ ಮಿಶ್ರರ ವಿವಾಹ ಭಾಮತಿಯೊಡನೆ ಆದಾಗಲೂ, ಅವರು ತತ್ವಚಿಂತನೆಯಲ್ಲಿ ತನ್ಮಯರಾಗಿದ್ದರು. ವಿವಾಹವಾಗಿ ಮಡದಿ ಮನೆಗೆ ಬಂದರೂ ತತ್ವಚಿಂತನೆ ಬಿಡಲಿಲ್ಲ. ಹೊರಗಿನ ಪ್ರಪಂಚದ ತಿಳುವಳಿಕೆಯೇ ಇರಲಿಲ್ಲ. ತನ್ನ ಗುರುವಿನ ಆಜ್ಞೆಯಂತೆಯೇ ಮಹಾಗ್ರಂಥವೊಂದನ್ನು ಬರೆಯಲು ಆರಂಭಿಸಿದ್ದರು. ಆಗ ವಯಸ್ಸು ಇಪ್ಪತ್ತೈದು. ತಾನು ಬರೆಯಬೇಕಾದ ವಿಚಾರಗಳನ್ನು ಸದಾ ಚಿಂತಿಸುತ್ತಿದ್ದರು. ಮನೆಗೆ ಬಂದ ಹೆಂಡತಿಯನ್ನೂ ಗಮನಿಸಲಾಗದಂತಹ ಏಕಾಗ್ರತೆ ಅವರದ್ದಾಗಿತ್ತು. ಭಾಮತಿ ತನ್ನ ಪತಿಯ ಮನಸ್ಸನ್ನು ಬೇರೆಡೆ ಒಯ್ಯಲು ಬಯಸಲಿಲ್ಲ. ಅವರ ಮಹಾಕಾರ್ಯದಲ್ಲಿ ತಾನೂ ಭಾಗಿಯಾಗುತ್ತೇನೆಂದು ದೃಢವಾಗಿ ನಿಶ್ಚಯಿಸಿದಳು. ಪ್ರತಿನಿತ್ಯ ಗಂಡನ ಸೇವೆಯಲ್ಲಿ ತನ್ಮಯಳಾದಳು. ಪತಿಯ ಕಾರ್ಯಕ್ಕೆ ಒಂದಿಷ್ಟೂ ತೊಂದರೆ ಆಗದಂತೆ, ಅವರ ಚಿತ್ತ ಚೆದುರುವಂತೆ ಬಹು ಎಚ್ಚರಿಕೆಯಿಂದ ನಡೆದುಕೊಂಡಳು. ಕಾಲ ಕಾಲಕ್ಕೆ ಊಟೋಪಚಾರ ಮಾಡುತ್ತಿದ್ದಳು. ಬರೆದು ರಾಶಿ ಹಾಕಿದ್ದ ತಾಳೆಯ ಗರಿಗಳನ್ನೆಲ್ಲ ಕ್ರಮಬದ್ಧವಾಗಿ ಜೋಡಿಸಿ ಇಡುತ್ತಿದ್ದಳು. ವಾಸವಾಗಿದ್ದ ಕುಟೀರವನ್ನು ಸ್ವಚ್ಛವಾಗಿ ಇಡುತ್ತಿದ್ದಳು. ವಸ್ತ್ರಗಳನ್ನು ಶುಭ್ರವಾಗಿ ಇಡುತ್ತಿದ್ದಳು. ಹೀಗೆ ಹಲವು ದಶಕಗಳೇ ಕಳೆದುಹೋದವು.

ಒಂದು ದಿನ ಸಂಜೆಯ ಹೊತ್ತು. ಎಂಬತ್ತೈದರ ಹಣ್ಣು ಮುದುಕ ವಾಚಸ್ಪತಿಮಿಶ್ರರು ತಮ್ಮ ಗ್ರಂಥದ ಕೊನೆಯ ಸಾಲುಗಳನ್ನು ಬರೆಯುತ್ತಿದ್ದರು. ಅಷ್ಟರಲ್ಲಿ ಎಣ್ಣೆಯ ದೀಪ ನಂದಿತು. ಭಾಮತಿ ಮೆಲ್ಲನೆ ಬಂದು ದೀಪವನ್ನು ಬೆಳಗಿಸಿಟ್ಟು ಬಳಿಗೆ ಸರಿದಳು. ಅದು ಹೇಗೋ ವಾಚಸ್ಪತಿಮಿಶ್ರರ ಗಮನಕ್ಕೆ ಬಂದಿತು. ನಾರು ಮಡಿಯುಟ್ಟ ಒಬ್ಬಳು ಮುದುಕಿ ಎದುರು ಕಾಣಿಸಿದಳು. 'ತಾವು ಯಾರು?' ಎಂದರು. 'ನಾನು ನಿಮ್ಮ ಧರ್ಮಪತ್ನಿ!' ಎಂದು ಭಾಮತಿ ಹೇಳಿದಳು. 'ನಮ್ಮ ವಿವಾಹ ಆದದ್ದು ಯಾವಾಗ?' ಎಂದು ವಾಚಸ್ಪತಿ ಕೇಳಿದರು. 'ಈಗ ಅರವತ್ತೈದು ವರ್ಷಗಳ ಹಿಂದೆ ನಾವು ದಂಪತಿಗಳಾದೆವು. ಇದೋ ನೋಡಿ ತಾವು ಕಟ್ಟಿದ ಕೊರಳ ಮಾಂಗಲ್ಯ' ಎಂದು ತೋರಿಸಿದಳು. 'ಇಲ್ಲಿಯವರೆಗೆ ಎಲ್ಲಿದ್ದಿರಿ? ಏನು ಮಾಡುತ್ತಿದ್ದಿರಿ?' ಎಂದು ವಾಚಸ್ಪತಿಗಳು ಕೇಳಿದರು. 'ತಮ್ಮ ಸೇವೆಯಲ್ಲಿ ಮಗ್ನಳಾಗಿ ಇದೇ ಕುಟೀರದಲ್ಲಿದ್ದೆ.' ಎಂದಳು ಭಾಮತಿ.

ವಾಚಸ್ಪತಿಗಳಿಗೆ ತಮ್ಮ ಧರ್ಮಪತ್ನಿ ಮಾಡಿದ ಸೇವೆ, ತ್ಯಾಗ ತಿಳಿದು ರೋಮಾಂಚನವಾಯಿತು. ಅವರು ಆಕೆಯನ್ನು ಕುರಿತು, 'ಈ ಗ್ರಂಥವನ್ನು ನಾನೊಬ್ಬನೇ ಬರೆದಂತಾಗಲಿಲ್ಲ. ನೀನೂ ನಾನು ಸೇರಿಯೇ ಈ ಗ್ರಂಥ ಜನ್ಮ ತಾಳಿದೆ. ಈ ಗ್ರಂಥವೇ ನಮಗೆ ಹುಟ್ಟುವ ಮಗು. ಅಂದ ಹಾಗೆ ನಿನ್ನ ಹೆಸರೇನು?' ಎಂದು ಕೇಳಿದರು. 'ಭಾಮತಿ' ಎಂದಳಾಕೆ. 'ಭಾಮತಿ ನನ್ನ ಜೊತೆ ಈ ಗ್ರಂಥಕ್ಕಾಗಿಯೇ ದುಡಿದ ನಿನ್ನ ಹೆಸರನ್ನೇ ಈ ಗ್ರಂಥಕ್ಕೆ ಇಡೋಣ ಈ ಸಾವಿಲ್ಲದ ಶಿಶು, ತಂದೆ-ತಾಯಿಗಳಾದ ನಮ್ಮಿಬ್ಬರ ಹೆಸರನ್ನು ಬೆಳಗುವ ಧ್ರುವತಾರೆಯಾಗಲಿ' ಎಂದು ಹೇಳುತ್ತಾ, ವಾಚಸ್ಪತಿಮಿಶ್ರರು ಕಟ್ಟುತ್ತಿದ್ದ ತಾಳೆಯ ಗರಿಗಳನ್ನು ಬಿಚ್ಚಿ ಆರಂಭದ ಪತ್ರದ ಮೇಲ್ಭಾಗದಲ್ಲಿ **'ಭಾಮತಿ'** ಎಂಬ ಶೀರ್ಷಿಕೆಯನ್ನು ಬರೆದು, ಪುನಃ ಮೊದಲಿನಂತೆಯೇ ಜೋಡಿಸಿ ಕಟ್ಟಿಟ್ಟರು.

## ವಿದ್ಯಾಕೇಂದ್ರ — ಸ್ಥಾನೀಯ ಪಾಲಕರ ಸಭೆಗಳು





ಶ್ರೀರಾಮ ವಿದ್ಯಾಕೇಂದ್ರದ ವಿದ್ಯಾರ್ಥಿಪಾಲಕರನ್ನು ಅವರವರ ಗ್ರಾಮದಲ್ಲೇ ಸೇರಿಸಿ, ಸಭೆಗಳನ್ನು ನಡೆಸಲಾಯಿತು. ಪೋಷಕರ ಅಭಿಪ್ರಾಯ ಹಾಗೂ ಸುಧಾರಿಸಬೇಕಾದ ಅಂಶಗಳ ಬಗ್ಗೆ ಈ ಸಂದರ್ಭಗಳಲ್ಲಿ ಚರ್ಚಿಸಲಾಯಿತು.

**ಬೋಳ್ಯಾರ್** ಸುತ್ತಮುತ್ತಲಿನ ಪರಿಸರದಿಂದ ಬರುತ್ತಿರುವ ವಿದ್ಯಾರ್ಥಿಗಳ ಪೋಷಕರ ಸಭೆಯನ್ನು ಎಸ್.ಹೆಚ್ ಸಭಾಂಗಣ ಬೋಳ್ಯಾರ್‌ನಲ್ಲಿ ನಡೆಸಲಾಯಿತು. ನಮ್ಮ ಸುತ್ತಮುತ್ತಲಿನ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸುವುದಾಗಿ ಸಭೆಯಲ್ಲಿ ಹೇಳಿದರು.

**ಶಂಬೂರು** ಶ್ರೀರಾಮ ಭಜನಾ ಮಂದಿರದಲ್ಲಿ ಸಭೆ ನಡೆಸಲಾಯಿತು. ಹೆಚ್ಚಿನ ಪೋಷಕರು ಭಾಗವಹಿಸಿ ಶಾಲೆಯ ಬಗ್ಗೆ ಹೆಮ್ಮೆಪಟ್ಟರು. ಇಬ್ಬರು ಪೋಷಕರು ನಾಟಿಗೆ ಬಸ್ಸಿನ ವ್ಯವಸ್ಥೆ ಮಾಡಿದರೆ ನಮ್ಮ ವಿದ್ಯಾರ್ಥಿಗಳಿಗೆ ಶಾಲೆಗೆ ಬರಲು ಇನ್ನೂ ಅನುಕೂಲವಾದೀತು ಎಂದರು.

**ಸಜಿಪ** ಶ್ರೀಕೃಷ್ಣ ಶಿಶುಮಂದಿರದಲ್ಲಿ ನಡೆದ ಸಭೆಯಲ್ಲಿ ಶಾಲಾ ವಾಹನ ವ್ಯವಸ್ಥೆಯನ್ನು ವಿಸ್ತರಿಸುವ ಬಗ್ಗೆ

ಚರ್ಚಿಸಲಾಯಿತು. ಮಗುವಿನ ದಿನಚರಿಯಲ್ಲಾದ ಸ್ವಾಭಾವಿಕ ಬದಲಾವಣೆಯ ಬಗ್ಗೆ ಪೋಷಕರು ಗಮನ ವಹಿಸುವಂತೆ ಈ ಸಂದರ್ಭದಲ್ಲಿ ತಿಳಿಸಲಾಯಿತು.

**ಮಂಚಿ,** ಇದರ ಸುತ್ತಮುತ್ತಲಿನ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ರೋಟರಿ ಕ್ಲಬ್ ಸಭಾಂಗಣ ಮಂಚಿ ಇಲ್ಲಿ ಸಭೆ ನಡೆಸಲಾಯಿತು.

ಎಲ್ಲಾ ಕಡೆಯ ಸಭೆಯಲ್ಲಿ ಪೋಷಕರಿಂದ ಉತ್ತಮ ಪ್ರೋತ್ಸಾಹ, ಸಹಕಾರ ದೊರೆಯಿತು. ಶ್ರೀರಾಮ ಶಾಲೆಗೆ ಸೇರಿಸಿದ ನಂತರ ಮಗುವಿನ ನಡವಳಿಕೆ ಹಾಗೂ ಕಲಿಕೆಯಲ್ಲಾದ ಬದಲಾವಣೆಯ ಬಗ್ಗೆ ತಿಳಿಸಿ ಪೋಷಕರು ಸಂತಸಪಟ್ಟರು.

ಸಭೆಯಲ್ಲಿ ವಿದ್ಯಾಕೇಂದ್ರದ ಸಂಚಾಲಕರು ಡಾ। ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು. ಅಧ್ಯಕ್ಷ ನಾರಾಯಣ ಸೋಮಯಾಜಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ಕಾಲೇಜಿನ ಪ್ರಾಂಶುಪಾಲರು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

## ಶಿಶುಮಂದಿರ

### ಗಣ್ಯರ ಭೇಟಿ 11, 12–03–2014



ರಾಷ್ಟ್ರ ಸೇವಿಕಾ ಸಮಿತಿಯ ಅಖಿಲಭಾರತ ಪ್ರಮುಖ್ ಸಂಚಾಲಿಕಾ ವಂದನೀಯ ಶಾಂತಕುಮಾರಿ ಹಾಗೂ ಹಿಂದೂ ಸೇವಾ ಪ್ರತಿಷ್ಠಾನದ ಪ್ರಾಂತ ಪ್ರಮುಖ್ ಭ॥ ಛಾಯಾ ಇವರು ತಮ್ಮ ಎರಡು ದಿನಗಳ ಶಿಶುಮಂದಿರ ಪ್ರವಾಸದಲ್ಲಿ ಶ್ರೀ ಗಣೇಶ ಶಿಶುಮಂದಿರ ಬೊಂಡಾಲ ಹಾಗೂ ಶ್ರೀರಾಮ ಶಿಶು ಮಂದಿರ ಕಲ್ಲಡ್ಕ ಇಲ್ಲಿಗೆ ಭೇಟಿ ನೀಡಿದರು. ಪುಟಾಣಿಗಳ ಚಟುವಟಿಕೆಯನ್ನು ವೀಕ್ಷಿಸಿ ಮಾರ್ಗದರ್ಶನ ಮಾಡಿದರು. ಮರುದಿನ ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು ಇದರ ಅಧೀನದಲ್ಲಿ ನಡೆಯುವ ನಿವೇದಿತಾ ಶಿಶುಮಂದಿರ ಪುತ್ತೂರು ಇಲ್ಲಿಗೆ ಭೇಟಿ ನೀಡಿದರು.

ಭೇಟಿಯ ಸಂದರ್ಭದಲ್ಲಿ ಗಮನಿಸಿದ ಅಂಶಗಳ ಬಗ್ಗೆ ಸಂಬಂಧಿಸಿದವರಲ್ಲಿ ಚರ್ಚಿಸಿ, 'ಸಂಸ್ಕಾರಯುತ ಸಮಾಜ ನಿರ್ಮಾಣದಲ್ಲಿ ಇಂತಹ ಶಿಶು ಮಂದಿರಗಳ ಪಾತ್ರ ಮಹತ್ವದ್ದು, ಆ ನಿಟ್ಟಿನಲ್ಲಿ ಇಲ್ಲಿನ ಕಾರ್ಯಚಟುವಟಿಕೆಗಳು ಉಳಿದವರಿಗೆ ಮಾದರಿಯಾಗಿದೆ. ಇಲ್ಲಿನ ಆಡಳಿತ ಮಂಡಳಿ, ಪೋಷಕ ವರ್ಗ, ಶಿಕ್ಷಕರ ಕಾರ್ಯವು ಶ್ಲಾಘನೀಯವಾದುದು' ಎಂದು ಅಭಿಪ್ರಾಯ ಪಟ್ಟರು.

### ಪೋಷಕರ ಸಭೆ 11–03–2014

ಶ್ರೀರಾಮ ಶಿಶು ಮಂದಿರದ ಶೈಕ್ಷಣಿಕ ವರ್ಷದ ಕೊನೆಯ ಪೋಷಕರ ಸಭೆಯು ವೇದವ್ಯಾಸ ಮಂದಿರದಲ್ಲಿ ನಡೆಯಿತು. ಮಾರ್ಗದರ್ಶಕರಾಗಿ ಅಖಿಲ ಭಾರತೀಯ ಪ್ರಮುಖ ಸಂಚಾಲಿಕ ವಂದನೀಯ ಶಾಂತಕುಮಾರಿ ಮಾತನಾಡಿ 'ಶಿಶು ಮಂದಿರದಲ್ಲಿ ನೀಡುವ ಚಟುವಟಿಕೆಗಳು ಮಗುವಿನ ಕಲ್ಪನಾ ಶಕ್ತಿ ಹೆಚ್ಚಿಸಲು ಸಹಾಯಕವಾಗುತ್ತದೆ. ಶಾಲೆಯಲ್ಲಿ ನೀಡುವ ಸಂಸ್ಕಾರಗಳ ಕುರಿತು ಪೋಷಕರು ನಿರಂತರ ಮಾಹಿತಿಯನ್ನು ಪಡೆದುಕೊಳ್ಳುತ್ತಿರಬೇಕು. ಮಗುವನ್ನು ಉತ್ತಮ ನಾಗರೀಕನನ್ನಾಗಿ ರೂಪಿಸುವುದರ ಜೊತೆಗೆ ಉತ್ತಮ ಆದರ್ಶ ಮನೆ ನಿರ್ಮಾಣ ಮಾಡುವಲ್ಲೂ ಪೋಷಕರು ಗಮನವಹಿಸಬೇಕು' ಎಂದರು.



ಸಂಸ್ಥೆಯ ಸಂಚಾಲಕ ಡಾ।ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು.

ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ, ಶಿಶು ಶಿಕ್ಷಣ ಸಂಯೋಜಕಿ ಭ॥ ಛಾಯಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭೆಯಲ್ಲಿ ಶ್ರೀಕೃಷ್ಣ ಶಿಶು ಮಂದಿರ ಸಜಿಪ, ಅಕ್ಕ ಮಹಾದೇವಿ ಶಿಶು ಮಂದಿರ ಬಿ.ಸಿ.ರೋಡು,ಶ್ರೀರಾಮ ಶಿಶು ಮಂದಿರ ಕಲ್ಲಡ್ಕ ಇಲ್ಲಿನ 70ಕ್ಕೂ ಹೆಚ್ಚು ಪಾಲಕರು, ಆಡಳಿತ ಮಂಡಳಿಯ ಸದಸ್ಯರುಗಳು ಭಾಗವಹಿಸಿದ್ದರು. ಶ್ರೀಮತಿ ರಾಜೀವಿ ಸ್ವಾಗತಿಸಿ, ಶ್ರೀಮತಿ ಮಲ್ಲಿಕಾ ವಂದಿಸಿದ ಕಾರ್ಯಕ್ರಮವನ್ನು ಶ್ರೀಮತಿ ಮಮತಾ ನಿರೂಪಿಸಿದರು.

## ಪ್ರಾಥಮಿಕ

ಶ್ರೀರಾಮ ಪ್ರಾಥಮಿಕ ಶಾಲೆ, ಕಲ್ಲಡ್ಕ ಇಲ್ಲಿಯ ಪುಟಾಣಿಗಳ ಬೇಸಿಗೆ ಶಿಬಿರವು 'ಚಿಣ್ಣರ ಲಹರಿ' ಎಂಬ ನಾಮಾಂಕಿತದೊಂದಿಗೆ ಅತಿಥಿಗಳು 'ಪಣವ'ವನ್ನು ಬಾರಿಸುವುದರ ಮೂಲಕ ಉದ್ಘಾಟನೆಗೊಂಡಿತು.

ಉದ್ಘಾಟನೆಗೈದ ಶ್ರೀಮತಿ ಸುಜಾತ (ಬಂಟ್ವಾಳ ಕ್ಷೇತ್ರ ಶಿಕ್ಷಣ ಸಂಯೋಜಕಿ) ಉತ್ತಮ ವಾತಾವರಣದಲ್ಲಿ ಒಂದು ಹೊಸ ಲೋಕಕ್ಕೆ ಹೋದ ಅನುಭವವಾಯಿತು.ಮಕ್ಕಳಲ್ಲಿರುವ ಸುಪ್ತ ಪ್ರತಿಭೆ ಹೊರಬಂದು ಅವರಲ್ಲಿರುವ ಭಯವನ್ನು ದೂರಗೊಳಿಸಿ ನಿರ್ಭೀತರನ್ನಾಗಿ ಮಾಡುವಲ್ಲಿ ಶಿಬಿರಗಳು ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಾವು ಹುಟ್ಟುವಾಗ ಉಸಿರಿರುತ್ತದೆ, ಹೆಸರಿರುವುದಿಲ್ಲ. ಆದರೆ ಸಾಯುವಾಗ ಉಸಿರಿರುವುದಿಲ್ಲ, ಹೆಸರಿರುತ್ತದೆ. ಆದ್ದರಿಂದ ಎಲ್ಲರೂ ಉತ್ತಮರಾಗಿ ಮಾದರಿ ಪ್ರಜೆಗಳಾಗಬೇಕೆಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಬಾಳ್ತಿಲ ಗ್ರಾಮ ಪಂಚಾಯತ್ (ಪಿ.ಡಿ.ಓ) ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಪುಷ್ಪ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಪಟ್ಟಾಭಿರಾಮ ಟ್ರಸ್ಟ್‌ನ ಸದಸ್ಯೆ ಶ್ರೀಮತಿ ವಿಜಯಾ.ವಿ.ಪ್ರಭು, ವಹಿಸಿ 'ಶಿಕ್ಷಕರು ಮಕ್ಕಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುವರು, ಜೀವನದ ಕೊನೆಯವರೆಗೂ ನೆನಪಿನಲ್ಲಿ ಉಳಿಯುವ ವ್ಯಕ್ತಿಯೆಂದರೆ ಶಿಕ್ಷಕರು. ಶಿಕ್ಷಕರ ಮಾರ್ಗದರ್ಶನದೊಂದಿಗೆ ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು' ಎಂದು ನುಡಿದರು.

### ಚಿಣ್ಣರ ಲಹರಿ ಬೇಸಿಗೆ ಶಿಬಿರ

**ದಿನಾಂಕ : 27.03.2014**





ವೇದಿಕೆಯಲ್ಲಿ ಶಾಲಾಭಿವೃದ್ಧಿ ಅಧ್ಯಕ್ಷರಾದ ಶಿವಗಿರಿ ಸತೀಶ್‌ಭಟ್, ಮುಖ್ಯೋಪಾಧ್ಯಾಯರಾದ ರವಿರಾಜ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಿವಗಿರಿ ಸತೀಶ್‌ಭಟ್ ಸ್ವಾಗತಿಸಿ ರವಿರಾಜ್ ವಂದಿಸಿದರು. ಶ್ರೀಮತಿ ರೂಪಕಲಾ ನಿರೂಪಿಸಿದರು.

## ಸಾಮೂಹಿಕ ಹುಟ್ಟುಹಬ್ಬ ಮತ್ತು ವಾರ್ಷಿಕ ಭಜನೆ 1-3-2014




ಹುಟ್ಟುಹಬ್ಬವೆಂದರೆ ಬರೇ ಆಡಂಬರದ ಆಚರಣೆಯಲ್ಲ.ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಆಚರಿಸಬೇಕು. ಆಡಂಬರವಿಲ್ಲದೆ ಸರಳವಾಗಿ, ಸಾಮೂಹಿಕವಾಗಿ, ಸಾಂಪ್ರದಾಯಿಕವಾಗಿ ಆಚರಿಸಿದಾಗ ನಮ್ಮ ಸಂಸ್ಕೃತಿಯನ್ನು ಉಳಿಸಿದಂತಾಗುತ್ತದೆ. 84 ಕೋಟಿ ಜೀವಿಗಳಲ್ಲಿ ಮಾನವನು ತನ್ನ ಬುದ್ಧಿಯಲ್ಲಿ, ವಿವೇಚನೆಯಲ್ಲಿ ಶ್ರೇಷ್ಠ. ಹಾಗಾಗಿ ನಾವು ಬುದ್ಧಿವಂತಿಕೆಯನ್ನು ಉಪಯೋಗಿಸಿ ಸ್ವಾಮಿ ವಿವೇಕಾನಂದ, ಡಾ॥ ಬಿ.ಆರ್.ಅಂಬೇಡ್ಕರ್‌ರವರ ಆದರ್ಶಗಳನ್ನು ಮೈಗೂಡಿಸಿಕೊಂಡು ಉತ್ತಮ ವ್ಯಕ್ತಿಗಳಾಗಬೇಕು. ಮನೆಯನ್ನು ಉರಿಸುವ ಬೆಂಕಿಯ ಕಿಡಿಗಳಾಗದೆ ನಾವು ಮನೆಯನ್ನು ಬೆಳಗುವ ದೀಪಗಳಾಗಬೇಕೆಂದು ಶ್ರೀರಾಮ ಪದವಿಪೂರ್ವ ಕಾಲೇಜಿನ ಹಿಂದಿ ಉಪನ್ಯಾಸಕಿಯಾದ ಶ್ರೀಮತಿ ಶೋಭಾ ಮಾತಾಜಿ ಶ್ರೀರಾಮ ಪ್ರಾಥಮಿಕ ಶಾಲೆಯಲ್ಲಿ ನಡೆದ ಸಾಮೂಹಿಕ ಹುಟ್ಟುಹಬ್ಬ ಮತ್ತು ವಾರ್ಷಿಕ ಭಜನಾ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಶುಭಹಾರೈಸಿದರು.

ಇದೇ ಸಂದರ್ಭದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ ಹಾಗೂ ಪೋಷಕರು, ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾದ ದಯಾನಂದ, ಸೀತಾಭಿರಾಮ ಟ್ರಸ್ಟ್‌ನ ಸದಸ್ಯರು, ವಕೀಲರು ಆದ ಉಷಾಗೋಪಾಲ್ ಹಾಗೂ ಶಾಲಾ ಮುಖ್ಯೋಪಾಧ್ಯಾಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹುಟ್ಟುಹಬ್ಬ ಆಚರಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಗುರುವೃಂದದವರಿಂದ ಆರತಿ, ಅಕ್ಷತೆ, ತಿಲಕಧಾರಣೆ ಮಾಡಲಾಯಿತು .ಕಾರ್ಯಕ್ರಮಕ್ಕೆ ಸುಪ್ರಿತಾ ಮಾತಾಜಿ ಸ್ವಾಗತಿಸಿ, ಶಮಿತಾ ಮಾತಾಜಿ ವಂದಿಸಿದರು. ಕಾರ್ಯಕ್ರಮವನ್ನು ಶ್ವೇತಾ. ಎಂ ಮಾತಾಜಿ ನಿರೂಪಿಸಿದರು.

## ಗಣ್ಯರ ಭೇಟಿ 17.03.2014




ಪರಶುರಾಮ್ ತೋಟದ ಸರಬ, ಕೃಷಿಕರು ಮತ್ತು ಉದ್ಯಮಿಗಳು, ಶ್ರೀಯುತ ರಾಧಾಕೃಷ್ಣ ಭಕ್ತ ವಿವೇಕಾನಂದ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಶ್ರೀಯುತ ವಸಂತ ಸುರತ್ಕಲ್ ಇವರುಗಳು ಸರಸ್ವತಿ ವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಶ್ರೀಯುತ ವಸಂತ ಸುರತ್ಕಲ್ ಅವರು “ಈ ಶಾಲೆಯ ಬಗ್ಗೆ ಮೊದಲು ಕೇಳಿ ತಿಳಿದುದ್ದಕ್ಕಿಂತ ಕಣ್ಣಾರೆ ಕಂಡಾಗ ಮೊದಲಿಗಿಂತ ಹತ್ತು ಪಟ್ಟು ಹೆಚ್ಚು ಒಳ್ಳೆಯ ಅಂಶಗಳನ್ನು ಕಂಡುಕೊಂಡೆ. ಮಕ್ಕಳ ಶಿಸ್ತು, ಸಮವಸ್ತ್ರ ಹಾಗೂ ಶಾಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಕನ್ನಡ ಭಾಷೆಯ ಮೇಲೆ ನಿಮಗೆಲ್ಲ ಪ್ರೀತಿ ಇರಲಿ ಎಂದು ನುಡಿದರು.

# ಪ್ರೌಢಶಾಲೆ

**ಬೇಸಿಗೆ ಶಿಬಿರ :** ಶ್ರೀರಾಮ ಪ್ರೌಢ ಶಾಲೆ, ಕಲ್ಲಡ್ಕ ಇಲ್ಲಿಯ ವಿದ್ಯಾರ್ಥಿಗಳ ಬೇಸಿಗೆ ಶಿಬಿರವನ್ನು **ಶುನಾಭ, ಕೋದಂಡ** ಎಂಬ ನಾಮಾಂಕಿತದೊಂದಿಗೆ ವಿವೇಕಾನಂದ ಬಿ.ಇ.ಡಿ ಕಾಲೇಜು ಉಪನ್ಯಾಸಕಿ ಶೋಭಿತಾ ಸತೀಶ್‌ರವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆ ಮಾಡಿದರು.

ಬಳಿಕ ಮಾತನಾಡಿದ ಅವರು ‘ಪರೀಕ್ಷೆ ಮುಗಿದ ಬಳಿಕ ಈ ರೀತಿಯ ಬೇಸಿಗೆ ಶಿಬಿರಗಳು ವಿದ್ಯಾರ್ಥಿಗಳಿಗೆ ಪ್ರಯೋಜನದಾಯಕವಾದುದು ಎಂದರು. ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಸಂಗೀತಗಳನ್ನು ಹೇಳಿಕೊಟ್ಟು ಅವರಲ್ಲಿಯೇ ಬೇರೆ ಬೇರೆ ರಾಗದಲ್ಲಿ ಹಾಡನ್ನು ಹಾಡಿಸಿದರು. ಮಾತ್ರವಲ್ಲದೇ ಸಂಗೀತದಲ್ಲಿ ಆಗುವ ಪ್ರಯೋಜನಗಳನ್ನು ತಿಳಿಸಿ ಸುಮಾರು ಒಂದೂವರೆ ಗಂಟೆಯಷ್ಟು ಹೊತ್ತು ವಿದ್ಯಾರ್ಥಿಗಳನ್ನು ಸಂಗೀತ ಲೋಕದಲ್ಲಿ ತೇಲಾಡಿಸಿದರು. ವಿದ್ಯಾರ್ಥಿಗಳು ಸಂಗೀತವನ್ನು ಕೇಳಿ-ಹಾಡಿ ಖುಷಿಪಟ್ಟರು.




## ವಿದ್ಯಾರ್ಥಿ ವೇತನ ವಿತರಣೆ :



2012-13ನೇ ಸಾಲಿನ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ನಮ್ಮ ವಿದ್ಯಾಕೇಂದ್ರದ ವಿದ್ಯಾರ್ಥಿಗಳಾದ ಲಾವಣ್ಯ, ದೀಕ್ಷಿತಾ ಹಾಗೂ ಥಂಬರ್ ಶಾಯೋ ಅಥ್ಲೆಟಿಕ್ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ್ದು, ಇವರಿಗೆ ಕ್ರೀಡಾ ವಿದ್ಯಾರ್ಥಿ ವೇತನ, ಕ್ರೀಡಾ ವಸ್ತ್ರ ಹಾಗೂ ಶೂಗಳನ್ನು ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶ್ರೀ ವಸಂತ ಮಾಧವ ಅವರು ವಿತರಿಸಿದರು. ಈ ವಿದ್ಯಾರ್ಥಿ ವೇತನವನ್ನು ತೇಜಸ್ವಿನಿ ಹಾಗೂ ನವ್ಯರಾಜ್ ಬೇಕಲ್ ಇವರು ಜೂಡೋ ವಿಭಾಗದಲ್ಲಿ ಮಾಡಿದ ಸಾಧನೆಗಾಗಿ ಪಡೆದುಕೊಂಡಿರುತ್ತಾರೆ.

**ಶಿಕ್ಷಕರ ತರಬೇತಿ : 22, 23 ಮತ್ತು 27, 28-03-14**

10ನೇ ತರಗತಿಯ ಹೊಸ ಪಠ್ಯಪುಸ್ತಕ ಕಾರ್ಯಾಗಾರವು ವಿವೇಕಾನಂದ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಶ್ರೀ ಜಿ.ಎಸ್. ಮುಡಂಬಡಿತ್ತಾಯ ಇವರ ನೇತೃತ್ವದಲ್ಲಿ ತೆಂಕಿಲದಲ್ಲಿ ನಡೆಯಿತು. ಗಣಿತ, ವಿಜ್ಞಾನ ಹಾಗೂ ಇಂಗ್ಲೀಷ್ ಬೋಧಿಸುವ ಶಿಕ್ಷಕರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ವಿವೇಕಾನಂದ ಬಿ.ಎಡ್ ಕಾಲೇಜು ಪುತ್ತೂರು ಇಲ್ಲಿ ನಡೆದ ಶಿಕ್ಷಕರ ತರಬೇತಿ ಕಾರ್ಯಾಗಾರದಲ್ಲಿ ನಮ್ಮ ಶಿಕ್ಷಕರಾದ ಶ್ರೀ ಜಯಾನಂದ ಪೆರಾಜೆ ಹಾಗೂ ಶ್ರೀ ರಾಜೇಶ್ ಭಾಗವಹಿಸಿ ಮಾಹಿತಿ ಪಡೆದುಕೊಂಡಿರುತ್ತಾರೆ.

**ಎಸ್.ಎಸ್.ಎಲ್.ಸಿ ಪರೀಕ್ಷೆ**

**ಶ್ರೀರಾಮ ಪ್ರೌಢ ಶಾಲೆ:**

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಶ್ರೀರಾಮ ಪ್ರೌಢಶಾಲೆಯ 293 ವಿದ್ಯಾರ್ಥಿಗಳ ಜೊತೆಗೆ ಸ್ಥಳೀಯ 4 ಪ್ರೌಢ ಶಾಲೆಗಳ ಒಟ್ಟು 533 ವಿದ್ಯಾರ್ಥಿಗಳು ಶ್ರೀರಾಮ ಪ್ರೌಢಶಾಲೆಯಲ್ಲಿ ಎಸ್. ಎಸ್.ಎಲ್.ಸಿ. ಪರೀಕ್ಷೆಯನ್ನು ಬರೆದರು. ಜಿಲ್ಲಾ,

ತಾಲೂಕು ಜಾಗೃತ ದಳ, ಹಾಗೂ ಅಂತರ್‌ಜಿಲ್ಲಾ ಜಾಗೃತ ದಳದ ಸದಸ್ಯರು ಕೇಂದ್ರಕ್ಕೆ ಭೇಟಿಯಿತ್ತು ಅತ್ಯುತ್ತಮ ಪರೀಕ್ಷಾ ವ್ಯವಸ್ಥೆಯನ್ನು ನೋಡಿ ಸಂತಸಪಟ್ಟರು.

ಪ್ರಾರಂಭದ ಪರೀಕ್ಷೆಯಂದು ಗೋಳ್ತಮಜಲು ಶಾಲೆಯ ಮೂಲಕ ಖಾಸಗಿಯಾಗಿ ಪರೀಕ್ಷೆ ಕಟ್ಟಿದ್ದ ವಿದ್ಯಾರ್ಥಿನಿ ಮಾಹಿತಿ ಕೊರತೆಯಿಂದ ಮಂಗಳೂರು ಕೇಂದ್ರಕ್ಕೆ ಹೋಗುವ ಬದಲು ಕಲ್ಲಡ್ಕಕ್ಕೆ ಬಂದಾಗ ಮಂಗಳೂರು ಕೇಂದ್ರಕ್ಕೆ ಕರೆದುಕೊಂಡು ಹೋಗಿ ಪರೀಕ್ಷೆ ಸ್ವೀಕರಿಸುವಂತೆ ವ್ಯವಸ್ಥೆಯನ್ನು ಮಾಡಿದ ವಿದ್ಯಾಕೇಂದ್ರದ ಸಿಬ್ಬಂದಿಗಳ ಕಾರ್ಯವನ್ನು ಇಲಾಖೆಯು ಶ್ಲಾಘಿಸಿತು.

**ಮಕ್ಕಳಲೋಕ ಪುಸ್ತಕ ಬಿಡುಗಡೆ : 24-03-2014**

ಕತೆ ಬರೆಯಲು ಸತತಾಭ್ಯಾಸ ವಿಸ್ತಾರವಾದ ಓದು ಮತ್ತು ಹಿರಿಯರ, ಶಿಕ್ಷಕರ ಪ್ರೋತ್ಸಾಹ ಅಗತ್ಯ ಎಂದು ಬಂಟ್ವಾಳ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಕ್ಕಳ ಲೋಕ ಘಟಕದ ಅಧ್ಯಕ್ಷ ನಿವೃತ್ತ ಪ್ರಾಚಾರ್ಯ ಎಂ.ಅನಂತಕೃಷ್ಣ ಹೆಬ್ಬಾರ್ ವಿಟ್ಲ ಇವರು ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮಕ್ಕಳ ಲೋಕದ ವತಿಯಿಂದ ವಿದ್ಯಾರ್ಥಿ ಲೇಖಕರ ಸಂಪಾದಿತ 'ಕಥಾಲೋಕ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು. ಸಾಹಿತಿ ಮಹಾಬಲ ಭಟ್



ನೆಗಳಗುಳಿ ಮುಖ್ಯ ಅತಿಥಿಯಾಗಿ ಮಾತನಾಡಿ 9ನೇ ಸಮ್ಮೇಳನದ ಆಯ್ದ ಕತೆಗಳನ್ನು ಪ್ರಕಟಿಸಲಾಗಿದ್ದು ಇನ್ನೂ ಉತ್ತಮ ಕತೆಗಳು, ಕವನಗಳು ಮುಂದಿನ ದಿನಗಳಲ್ಲಿ ಪ್ರಕಟವಾಗಲಿ ಎಂದು ಶುಭಹಾರೈಸಿದರು. ಮಕ್ಕಳ ಕಲ್ಪನೆಗಳು ಕಥಾರೂಪ ಪಡೆಯುತ್ತದೆ. ಅದು ಹೊಸ ಸಂಶೋಧನೆಗೂ ವಸ್ತುವಾಗಬಹುದು. ಬರೆಯುವ ಅಭ್ಯಾಸವನ್ನು ಮಕ್ಕಳು ನಿರಂತರ ಮುಂದುವರಿಸಬೇಕು ಎಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯ ಶ್ರೀ ವಸಂತ ಮಾಧವ ಹೇಳಿದರು.

ಮಕ್ಕಳ ಸಾಹಿತ್ಯಲೋಕ ಸಮ್ಮೇಳನಾಧ್ಯಕ್ಷೆ ಶ್ರೀರಾಮ ಪ್ರೌಢಶಾಲೆಯ ಅಧ್ಯಕ್ಷೆ ಪ್ರತೀಕ್ಷ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ ಅವಕಾಶ ಸಿಕ್ಕಿರುವುದಕ್ಕೆ ಕೃತಜ್ಞತೆ ಸಲ್ಲಿಸಿದ್ದರು. ಬಂಟ್ವಾಳ ತಾ.ಕ.ಸಾ.ಪ. ಅಧ್ಯಕ್ಷ ಜಯಾನಂದ ಪೆರಾಜೆ ಸ್ವಾಗತಿಸಿ ಪ್ರಸ್ತಾಪನೆಗೈದರು. ವಿದ್ಯಾರ್ಥಿಗಳಾದ ರಘುವೀರ ನಿರೂಪಿಸಿ, ರಾಮನಾರಾಯಣ ವಂದಿಸಿದರು.

**ವಿದ್ಯಾರ್ಥಿವೇತನಗಳ ವಿತರಣೆ :**



2012-13ನೇ ಸಾಲಿನ 10ನೇ ತರಗತಿಯಲ್ಲಿ 60%ಕ್ಕಿಂತ ಹೆಚ್ಚು ಅಂಕಗಳಿಸಿದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸರಕಾರದ ವತಿಯಿಂದ ನೀಡುವ ಪ್ರೋತ್ಸಾಹಕ ವಿದ್ಯಾರ್ಥಿವೇತನದ ಚೆಕ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು.

ಇದರ ಜೊತೆಗೆ 2013-14ನೇ ಸಾಲಿನಲ್ಲಿ 108 ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪ್ರೀ-ಮೆಟ್ರಿಕ್ ವಿದ್ಯಾರ್ಥಿ ವೇತನವನ್ನು, ಒಬ್ಬನಿಗೆ ಅಲೆಮಾರಿ ಜನಾಂಗದ ವಿದ್ಯಾರ್ಥಿ ವೇತನವನ್ನು ಹಾಗೂ 5 ವಿದ್ಯಾರ್ಥಿಗಳಿಗೆ ಅಂಗವಿಕಲ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು.

## ದೀಪಪ್ರದಾನ



10ನೇ ತರಗತಿ ವಿದ್ಯಾರ್ಥಿಗಳ ದೀಕ್ಷಾಂತ ಕಾರ್ಯಕ್ರಮ ದೀಪಪ್ರದಾನ ಮಾರ್ಚ್ 11ರಂದು ನಡೆಯಿತು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳ ರಾಜ್ಯ ಒಕ್ಕೂಟದ ಅಧ್ಯಕ್ಷ ತಿರುವಂಗ ನಾರಾಯಣ ಸ್ವಾಮಿ ಬೆಂಗಳೂರು, ಸ್ವಾಭಿಮಾನಿ ಟ್ರಸ್ಟ್‌ನ ರಾಜ್ಯಾಧ್ಯಕ್ಷ ನಿಕೇತ್‌ರಾಜ್ ಬೆಂಗಳೂರು, ಉದ್ಯಮಿ ಹರೀಶ್ ಪೂಂಜ, ಮಾತೃ ಮಂಡಳಿ ಅಧ್ಯಕ್ಷೆ ಸುಭದ್ರ ಭಟ್ ಉಪ್ಪಿನಂಗಡಿ ಭಾಗವಹಿಸಿದ್ದರು.

ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ|| ಪ್ರಭಾಕರ ಭಟ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ 'ದೀಪಪ್ರದಾನ' ನೆರವೇರಿಸಿಕೊಟ್ಟರು. ಉತ್ತಮ ಗುಣನಡತೆಗಳನ್ನು ಜೀವನಪೂರ್ತಿ ಅಳವಡಿಸಿಕೊಂಡು ಸಾಮಾಜಿಕ ಜೀವನದಲ್ಲಿ ಜವಾಬ್ದಾರಿ ನಿರ್ವಹಿಸುವ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂದು ಆಶೀರ್ವದಿಸಿದರು. ಡಾ|| ಕಮಲ ಪ್ರಭಾಕರ ಭಟ್, ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ, ಮುಖ್ಯೋಪಾಧ್ಯಾಯ ವಸಂತ ಮಾಧವ ಉಪಸ್ಥಿತರಿದ್ದರು. 10ನೇ ತರಗತಿಯ






ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಹಿರಿಯರಿಂದ ತಿಲಕಧಾರಣೆಯೊಂದಿಗೆ ಹಿರಿಯರು, ಗುರುಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದು-ಕೊಂಡರು. ವಿದ್ಯಾರ್ಥಿಗಳಾದ ವಾಸವಿ, ಸತ್ಯಶ್ಯಾಮ, ನಿಶ್ಮಿತಾ, ಚೇತನಾ, ರಕ್ಷಿತ್, ಚೈತ್ರಾ, ಆಶುತೋಷ್ ಭಂಡಾರ್‌ಕರ್ ಅನಿಸಿಕೆ ವ್ಯಕ್ತಪಡಿಸಿದರು. ಶಿಕ್ಷಕಿ ಗಾಯತ್ರಿ ಮಾತಾಜಿ ಶಿಕ್ಷಕರ ವತಿಯಿಂದ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು ನಿಶ್ಮಿತಾ ಸ್ವಾಗತಿಸಿ, ಚೈತ್ರಾ ನಿರೂಪಿಸಿ, ದಿತೇಂದ್ರ ವಂದಿಸಿದರು.

## ಪದವಿಪೂರ್ವ ವಿಭಾಗ

**ಪ್ರತಿಭಾರಾಮ ವಾರ್ಷಿಕ ಸಂಚಿಕೆ ಬಿಡುಗಡೆ : 6-3-2014**

ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳು ನೀಡಿದ ಲೇಖನ, ಚಿತ್ರ, ಕಥೆ, ಕಿರು ಬರಹಗಳಲ್ಲಿ ಅತ್ಯುತ್ತಮವಾದದನ್ನು ಆಯ್ಕೆ ಮಾಡಿ ವಾರ್ಷಿಕ ಸಂಚಿಕೆಯಲ್ಲಿ ಪ್ರಕಟಿಸಲಾಯಿತು. ಕಾಲೇಜಿನ ಸಮಗ್ರ ವರದಿ, ಮಾಹಿತಿ ಹಾಗೂ ಸಂಗ್ರಹಯೋಗ್ಯ ಲೇಖನಗಳನ್ನು ಒಳಗೊಂಡಂತೆ ಸಂಚಿಕೆಯನ್ನು ಸಿದ್ಧಪಡಿಸಲಾಗಿದೆ.




ಸಮಾಜದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸಂದರ್ಶಿಸಿ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಸಂಚಿಕೆಯನ್ನು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ದೀಪಪ್ರದಾನ ಕಾರ್ಯಕ್ರಮದ ದಿನ ಎನ್‌ಐಟಿಕೆ ಸುರತ್ಕಲ್ ಇಲ್ಲಿನ ಪ್ರೊಫೆಸರ್ ಬಾಬು ನಾರಾಯಣ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕ ಡಾ| ಪ್ರಭಾಕರ ಭಟ್, ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ, ಡಾ| ಕಮಲಾ ಪ್ರಭಾಕರ ಭಟ್ ಉಪಸ್ಥಿತರಿದ್ದರು.

### ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರ

ಶ್ರೀರಾಮ ಕಾಲೇಜು ಕಲ್ಲಡ್ಕ ಇದರ ಜೊತೆಗೆ ಸ್ಥಳೀಯ 2 ಕಾಲೇಜಿನ ಪಿಯುಸಿ ವಿದ್ಯಾರ್ಥಿಗಳ ಅಂತಿಮ ಪರೀಕ್ಷೆಗಾಗಿ ಶ್ರೀರಾಮ ಪದವಿ ಪೂರ್ವ ಕಾಲೇಜು ಕಲ್ಲಡ್ಕ ಪರೀಕ್ಷಾ ಕೇಂದ್ರವಾಗಿದ್ದು, ಇಲ್ಲಿ ಒಟ್ಟು 498 ವಿದ್ಯಾರ್ಥಿಗಳು ಪರೀಕ್ಷೆ ಬರೆದಿರುತ್ತಾರೆ. ಮುಖ್ಯ ಅಧೀಕ್ಷಕರಾಗಿ ಸರಕಾರಿ ಪ.ಪೂ ಕಾಲೇಜು ಬಿ.ಮೂಡ ಇಲ್ಲಿ ಪ್ರಾಂಶುಪಾಲೆ ಶ್ರೀಮತಿ ಸರಸ್ವತಿ, ಸಹ ಮುಖ್ಯ ಅಧೀಕ್ಷಕರಾಗಿ ಶ್ರೀ ಸುಬ್ರಹ್ಮಣ್ಯ ಪಿ.ಎಸ್, ಉತ್ತರಪತ್ರಿಕೆ ಪಾಲಕರಾಗಿ ಶ್ರೀ ರಾಜಾರಾಮ ವರ್ಮ, ಕಛೇರಿ ಅಧೀಕ್ಷಕರಾಗಿ ಶ್ರೀ ವಸಂತ ಬಲ್ಲಾಳ ಕರ್ತವ್ಯ ನಿರ್ವಹಿಸಿದರು.

### ಅವಲೋಕನ ಬೈಠಕ್ :

ವಿದ್ಯಾರ್ಥಿಗಳ ಹಿಂದಿನ ಪರೀಕ್ಷೆಗಳ ಫಲಿತಾಂಶದ ಆಧಾರದಲ್ಲಿ ಅವರ ಅಂತಿಮ ಪರೀಕ್ಷೆಯ ಫಲಿತಾಂಶದ ಕುರಿತು ಹಾಗೂ ಉಪನ್ಯಾಸಕರು ನಿರ್ವಹಿಸುತ್ತಿದ್ದ ಜವಾಬ್ದಾರಿಗಳ ಕುರಿತು ಸಂಸ್ಥೆಯ ಸಂಚಾಲಕ ಹಾಗೂ ಅಧ್ಯಕ್ಷರೊಂದಿಗೆ ಅವಲೋಕಿಸಿ ಚರ್ಚಿಸಲಾಯಿತು.

### ಪ್ರಥಮ ಪಿಯುಸಿ ಫಲಿತಾಂಶ 29–03–14 :

ಜನವರಿ ತಿಂಗಳಲ್ಲಿ ನಡೆದ ಪ್ರಥಮ ಪಿಯುಸಿ ಅಂತಿಮ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು ಕಲಾ ವಿಭಾಗದಲ್ಲಿ 93%, ವಾಣಿಜ್ಯದಲ್ಲಿ 94% ವಿಜ್ಞಾನ ವಿಭಾಗದಲ್ಲಿ 85% ಫಲಿತಾಂಶ ದಾಖಲಾಗಿರುತ್ತದೆ.

## ಪದವಿವಿಭಾಗ

### ಸಾಹಿತ್ಯ ಸಭೆ 22–03–2014

ಕನ್ನಡ ಸಾಹಿತ್ಯ ಸಂಘದ ವತಿಯಿಂದ ನಡೆದ "ಸಾಹಿತ್ಯ ಸಭೆ" ಕಾರ್ಯಕ್ರಮವನ್ನು ಯಸ್.ಸಿ.ಡಿ.ಸಿ.ಸಿ ಬ್ಯಾಂಕ್‌ನ ನಿವೃತ್ತ ಎಮ್.ಡಿ. ಶ್ರೀ ನಾರಾಯಣ ಕಾಮತ್ ಉದ್ಘಾಟಿಸಿ, "ಎಲ್ಲರೂ ಜೀವಿಸುತ್ತಾರೆ. ಆದರೆ ಸಾರ್ಥಕತೆ ಇರುವುದು ಆತನ ಪ್ರತಿಭೆಗೆ ಜೀವನಾಡಿಯಾದಾಗ ಮಾತ್ರ, ಅದಕ್ಕಾಗಿ ಜೀವನವನ್ನು ಉಜ್ಜೀವನಗೊಳಿಸಬೇಕು" ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಕಥಾಗೋಷ್ಠಿಯ ಅಧ್ಯಕ್ಷತೆ ವಹಿಸಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿಭಾಗ ಕಾರ್ಯಕಾರಿಣಿ ಸದಸ್ಯರಾದ ಸುರೇಶ್ ಪರ್ಕಳ ಮಾತಾನಾಡಿ ವಾಸ್ತವಿಕತೆಯನ್ನು ಬಿಂಬಿಸುವ ಕಥೆಗಳು ಇಂದು ದುರ್ಲಭವಾಗಿದೆ. ಮನೆಗಳಲ್ಲಿ ಕಥೆ ಹೇಳುವುದೇ ಇಲ್ಲವಾದ್ದರಿಂದ ನೈತಿಕ ಪ್ರಜ್ಞೆ, ಸಾಮಾಜಿಕ ಮೌಲ್ಯಗಳನ್ನು ಇಂದಿನ



ಸಮಾಜದಲ್ಲಿ ಮೂಡಿಸುವುದೇ ಕಷ್ಟ. ಭಾವನೆಗಳನ್ನು ತುಂಬಿ ಕೌತುಕವನ್ನು ಮೂಡಿಸುವ ಪರಿಣಾಮಕಾರಿ ಪ್ರಭಾವ ಬೀರುವಂತಿರಬೇಕು. ಹಾವಭಾವ, ಏರಿಳಿತ, ಶಬ್ದಗಳಲ್ಲಿ ಅಂತರ, ಇವೆಲ್ಲವೂ ಕಥಾಕಥನದಲ್ಲಿರಬೇಕು. ಇದಕ್ಕಾಗಿ ಪುಸ್ತಕಗಳ ಅಧ್ಯಯನ ಮಾಡಬೇಕು. ಸರಳ ಪುಸ್ತಕಗಳಿಂದ ಗಹನ ವಿಷಯದೆಡೆಗೆ ಮನಸ್ಸನ್ನು ವಾಲಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ ಸಮಾಜಶಾಸ್ತ್ರ ಉಪನ್ಯಾಸಕ ಹಾಗೂ



ಯುವ ಸಾಹಿತಿ ಮತ್ತು ಕವಿ ರಾಜರಾಮ ವರ್ಮ ಮಾತನಾಡಿ ಕವಿತೆಗಳ ಕವನಗಳ ಹಿನ್ನೆಲೆಯನ್ನು ತಿಳಿದು ಅದನ್ನು ಅರ್ಥೈಸಿಕೊಂಡರೆ ಮಾತ್ರ ಕವನದ ಬೆಲೆ ತಿಳಿಯಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಾಡು ಹರಟೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ರಾಮ ಪ್ರೌಢಶಾಲಾ ವಿಭಾಗದ ದೈಹಿಕ ಶಿಕ್ಷಣ ಶಿಕ್ಷಕರಾದ ರಾಧಾಕೃಷ್ಣ ಅಡ್ಯಂತಾಯ ವಹಿಸಿದರು.

ವಿದ್ಯಾರ್ಥಿಗಳಾದ ಚಿತ್ರಾಕ್ಷಿ ಕೆ, ಶಿವಪ್ರಸಾದ್, ನಿತಿನ್, ಅಕ್ಷತಾ ಕೆ, ನವೀನ, ಪ್ರವೀಣ, ಅಕ್ಷತಾ ಕೆ, ಚಿತ್ರಾಕ್ಷಿ, ರಶ್ಮಿ, ಲಾವಣ್ಯ, ಹರ್ಷಿತಾ, ಪ್ರಶಾಂತ, ನಿವೇದಿತಾ, ಪವಿತ್ರ, ರಶ್ಮಿತಾ ಶ್ವೇತಾ ಕೆ ಅಕ್ಷಿತಾ



ಕೃತಿ, ಉದಯ, ಮಾನಸ ಗೋಷ್ಠಿಯಲ್ಲಿ ಕಥೆ ಕವಿತೆ ಹಾಡು ಹರಟೆ ಮಂಡಿಸಿದರು...

ವೇದಿಕೆಯಲ್ಲಿ ಪ್ರಾಚಾರ್ಯರಾದ ಕೃಷ್ಣಪ್ರಸಾದ ಕೆ ಯನ್, ಹಾಗೂ ಕನ್ನಡ ಉಪನ್ಯಾಸಕರಾದ ಯತಿರಾಜ್, ಉಪಸ್ಥಿತರಿದ್ದರು. ಸೌಜನ್ಯ ಶೈನಾಕ್ಷಿ ಮಧುಶ್ರೀ ಮೋಹಿನಿ ಕಾರ್ಯಕ್ರಮ ನಿರೂಪಿಸಿದರು

### ಅಂತರ್ ಕಾಲೇಜು ಮಟ್ಟದ ಫೆಸ್ಟ್ 11–03–14

ಶ್ರೀನಿವಾಸ ಕಾಲೇಜು ವಳಚ್ಚಿಲ್‌ನಲ್ಲಿ ನಡೆದ ಅಂತರ್ ಕಾಲೇಜು ಮಟ್ಟದ ಫೆಸ್ಟ್‌ನಲ್ಲಿ ವಾಣಿಜ್ಯ ವಿಭಾಗದ 5 ವಿದ್ಯಾರ್ಥಿಗಳಾದ ಮಾನಸ , ನವೀನ್ ಕುಮಾರ್, ಶ್ರವಣ್, ಭಾಗವಹಿಸಿದ್ದು ಶ್ರೀ ವತ್ಸ ಹಾಗೂ ವರದ ಶಂಕರ್ ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನದೊಂದಿಗೆ ರೂ. 1000 ನಗದು ಬಹುಮಾನ ಪಡೆದಿರುತ್ತಾರೆ. ಮಾರ್ಗದರ್ಶಕರಾಗಿ ಉಪನ್ಯಾಸಕಿ ಕು. ಶೈಲಜಾ ಭಾಗವಹಿಸಿದ್ದರು.

### ಕಂಪೆನಿ ಸೆಕ್ರೆಟರಿ ಕುರಿತು ಮಾಹಿತಿ 06.03.2014



ಬೆಂಗಳೂರಿನ ಕೆರಿಯರ್ ಎವೆರ್‌ನೆಸ್ ಪ್ರೋಗ್ರಾಮರಾದ ಗಿರೀಶ್ ಕುಮಾರ್ ಕಂಪೆನಿ ಸೆಕ್ರೆಟರಿ ಎಂಬ ವಿಷಯದ ಕುರಿತಾದ ಪರೀಕ್ಷೆ ಸಂಬಂಧಿ ವಿಷಯಗಳ ಬಗ್ಗೆ ಅಂತಿಮ ವಿಭಾಗದ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

### ಕೆರಿಯರ್ ಗೈಡೆನ್ಸ್ 20–03–2014



ಬೆಸೆಂಟ್ ಮ್ಯಾನೇಜ್‌ಮೆಂಟ್ ಕಾಲೇಜಿನ ಉಪನ್ಯಾಸಕರಾದ ಸುರೇಶ್ ಇವರು ಕೆರಿಯರ್ ಗೈಡೆನ್ಸ್ ಎಂಬ ವಿಷಯದ ಕುರಿತಾಗಿ ಮಾಹಿತಿ ನೀಡಿ ಅಲ್ಲಿನ ಎಂ.ಬಿ.ಎ ಕಾಲೇಜಿನ ಅವಕಾಶಗಳು, ಸೌಲಭ್ಯಗಳ ಬಗ್ಗೆ ಅಂತಿಮ ವಿಭಾಗದ ವಿದ್ಯಾರ್ಥಿಗಳಿಗೆ ವಿವರಿಸಿದರು.

## ವಾಣಿಜ್ಯ ಸಂಸ್ಥೆಗಳ ಭೇಟಿ 17–03–2014



ಅಂತಿಮ ವಿಭಾಗದ ವಿದ್ಯಾರ್ಥಿಗಳಿಗೆಂದು ಯೋಜನಾ ಕಾರ್ಯ ಆಯೋಜಿಸಲಾಗಿತ್ತು. ಒಟ್ಟು 84



ವಿದ್ಯಾರ್ಥಿಗಳು ಭಾಗವಹಿಸಿದ್ದು ಘುಡ್ಡಿಗೋ ಆಗ್ರೋ ಕಂಪೆನಿ, ಉಲ್ಲಾಸ್ ಐಸ್‌ಕ್ರೀಂ ಕಂಪೆನಿ, ಯಜಮಾನ ಇಂಡಸ್ಟ್ರೀ, ಶ್ರೀ ಕೃಷ್ಣ ಬ್ರಿಕ್ಸ್ & ಟೈಲ್ಸ್ ಫ್ಯಾಕ್ಟರಿ, ಸೋಮಾಯಾಜಿ ಫರ್ನಿಚರ್ & ಐರನ್ ಇಂಡಸ್ಟ್ರೀ, ಸರಸಿಜಾ ಘುಡ್ಸ್ ಕಂಪೆನಿಗಳಿಗೆ ಭೇಟಿ ಇತ್ತು ಕಂಪೆನಿ ಸಮಗ್ರ ಅಧ್ಯಯನ ನಡೆಸಲಾಯಿತು.

**ಗಣ್ಯರ ಭೇಟಿ :**

ದ್ವಿತೀಯ ಪಿಯುಸಿ ಪರೀಕ್ಷಾ ನಿರ್ವಹಣಾ ವಿಭಾಗದ ಮುಖ್ಯಸ್ಥೆಯಾದ ಶ್ರೀಮತಿ ಸರಸ್ವತಿ ಇವರು ಶ್ರೀರಾಮ ಪದವಿ ಕಾಲೇಜಿನ ಸರಸ್ವತಿ ವಂದನದಲ್ಲಿ ಭಾಗವಹಿಸಿ, ಶ್ರೀರಾಮ ವಿದ್ಯಾಸಂಸ್ಥೆಯಲ್ಲಿ ಪಾಠಪ್ರವಚನದ ಜೊತೆಗೆ ಇತರ ಚಟುವಟಿಕೆಗಳು ನಡೆಯುತ್ತಿರುವುದು ಸಂತಸ ತಂದಿದೆ. ಅಲ್ಲದೇ ಸರಸ್ವತಿ ವಂದನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಕೆಲವೊಂದು ಉತ್ತಮ ಸಲಹೆಗಳನ್ನು ನೀಡಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಪ್ರಾಂಶುಪಾಲ ಶ್ರೀ ಕೃಷ್ಣಪ್ರಸಾದ ಸ್ವಾಗತಿಸಿ ವಂದಿಸಿದರು.

---

# ಮಕ್ಕಳ ಭವಿಷ್ಯರೂಪಣೆ ಹಿರಿಯರ ಹೊಣೆ



**ಪ್ರೊ॥ ಪಾರ್ವತಿ ಜಿ. ಐತಾಳ್**

ವಿಜ್ಞಾನ ಹಾಗೂ ತಂತ್ರಜ್ಞಾನಗಳ ಅದ್ಭುತ ಪ್ರಗತಿಯಿಂದಾಗಿ ಜಗತ್ತಿನಾದ್ಯಂತ ಮಾನವ ಬದುಕಿನ ವಿವಿಧ ರಂಗಗಳಲ್ಲಿ ಒಂದೆರಡು ಶತಮಾನಗಳಿಂದೀಚೆಗೆ ಆಶ್ಚರ್ಯಕರ ಬದಲಾವಣೆಗಳನ್ನು ನಾವು ಕಾಣುತ್ತಿದ್ದೇವೆ. ಜಾಗತೀಕರಣದ ಮೂಲಕ ಪ್ರಪಂಚವು ಭೌಗೋಳಿಕವಾಗಿಯೂ ಸಾಂಸ್ಕೃತಿಕವಾಗಿಯೂ ಒಂದಾಗಿರುವುದು ಈ ಬದಲಾವಣೆಗಳನ್ನು ಇನ್ನಷ್ಟು ಗಟ್ಟಿಗೊಳಿಸಿವೆ. ಇವುಗಳಿಂದ ಉಂಟಾಗಿರುವ ಹಾನಿ–ಲಾಭಗಳ ಕುರಿತು ಗಂಭೀರವಾಗಿ ಯೋಚಿಸಿ ನೋಡಿದರೆ ಎರಡೂ ಸಮಪ್ರಮಾಣದಲ್ಲಿದೆ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ ಲಾಭದ ಗುಣಾತ್ಮಕ ಅಂಶಗಳನ್ನು ಹಾನಿಯು ನುಂಗಿಬಿಟ್ಟು ಮಾನವರನ್ನು ವಿನಾಶದ ಅಂಚಿನತ್ತ ಒಯ್ಯಹೊರಟಿದೆ ಅನ್ನುವುದು ಸತ್ಯಕ್ಕೆ ದೂರವಾದ ಮಾತಂತು ಖಂಡಿತ ಅಲ್ಲ. ಈ ಅಪಾಯದ ಬಗ್ಗೆ ನಾವೆಲ್ಲ ಇಂದು ಯೋಚಿಸಬೇಕಾಗಿದೆ. ಈ ಭೂಮಿಯ ಮೇಲೆ ಬದುಕುವ ಹಕ್ಕನ್ನು ಪ್ರತಿಯೊಬ್ಬ ಮಾನವನೂ ಹುಟ್ಟುತ್ತಲೇ ಹೇಗೆ ಪಡೆದುಕೊಂಡು ಬರುತ್ತಾನೋ, ಹಾಗೆಯೇ ಮುಂದೆ ಬರುವವರಿಗಾಗಿ ಅದನ್ನು ಅಷ್ಟೇ ಸುಂದರವಾಗಿ ಉಳಿಸುವ ಕರ್ತವ್ಯವೂ ಅವನದ್ದಾಗಿದೆ. ನಾವು ನಮ್ಮ ವರ್ತಮಾನದ ಬದುಕನ್ನು ಸುಂದರವಾಗಿ ರೂಪಿಸಿಕೊಂಡರೆ ಮಾತ್ರ ಅದರ ಭದ್ರಬುನಾದಿಯ ಮೇಲೆ ಭವಿಷ್ಯವನ್ನು ಕಟ್ಟಬಲ್ಲೆವು.

**ಉಜ್ವಲ ಭವಿಷ್ಯಕ್ಕಾಗಿ ನೈತಿಕ ಪ್ರಜ್ಞೆ:**

ಮಕ್ಕಳು ನಮ್ಮ ದೇಶದ ಅತ್ಯಮೂಲ್ಯ ಆಸ್ತಿ. ನಮ್ಮ ಭವಿಷ್ಯ ನಮ್ಮ ಮಕ್ಕಳು. ತನ್ಮೂಲಕ ಮಾನವ ಜನಾಂಗದ ಭವಿಷ್ಯ ನಮ್ಮ ಕೈಯಲ್ಲಿದೆ. ಇವತ್ತು ನಮ್ಮ ಇಡಿಯ ಜಗತ್ತು ಒಂದು ಸ್ಪರ್ಧೆಯ ಕಣವಾಗಿಬಿಟ್ಟಿದೆ. ಸ್ಪರ್ಧೆಯಲ್ಲಿ ಗೆಲ್ಲಬೇಕೆಂದು ಉಸಿರುಗಟ್ಟಿ ವೇಗವಾಗಿ ಓಡುತ್ತಿರುವ ದೊಡ್ಡವರ ಸ್ವಾರ್ಥಕೋಸ್ಕರ ನಮ್ಮ ಮಕ್ಕಳ ಭವಿಷ್ಯವು ಬಲಿಯಾಗಬಾರದು. ಓಡುವವರ ಕಾಲ್ತುಳಿತಕ್ಕೆ ಸಿಕ್ಕಿ ಜಜ್ಜಿ ಹೋಗಬಾರದು. ಈ ಪ್ರಜ್ಞೆ ಪ್ರತಿಯೊಬ್ಬನಲ್ಲೂ ಮೂಡಿದರೆ ಮಾತ್ರ ನಾವು ಮುಂದೆ ಆಗಬಹುದಾದ ಅನಾಹುತದಿಂದ ನಮ್ಮನ್ನು ರಕ್ಷಿಸಿಕೊಳ್ಳಬಹುದು.

ಹೌದು, ನಾವು ನಮ್ಮ ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡುವ ದಾರಿಯಲ್ಲಿ ಇಂದು ಅನೇಕ ತಪ್ಪುಗಳನ್ನು ಮಾಡುತ್ತಿದ್ದೇವೆ. ನಮ್ಮ ಮಕ್ಕಳ ಭವಿಷ್ಯ ಬಂಗಾರವಾಗಬೇಕು, ಅವರು ಮುಂದೆ ಒಂದು ಸುಂದರ ಸಮಾಜದ, ಸುಭದ್ರ ದೇಶದ, ಸುರಕ್ಷಿತ ಜಗತ್ತಿನ ನಿರ್ಮಾಣಕ್ಕೆ ತಮ್ಮ ಕೊಡುಗೆಯನ್ನು ಕೊಡುವಂತಾಗಬೇಕು ಎಂಬ ದೃಷ್ಟಿಯಿಂದ ಇಂದಿನ ತಾಯಿ–ತಂದೆ, ಗುರುಹಿರಿಯರು ಅವರನ್ನು ಬೆಳೆಸುತ್ತಾ ಇಲ್ಲ ಎಂಬುದು ಕಟುವಾಸ್ತವ. ಇಂತಹ ಮಹತ್ವದ ಸ್ಥಾನಗಳಲ್ಲಿ ನಿಂತು ತಮ್ಮ ಕರ್ತವ್ಯಗಳನ್ನು ಅತ್ಯಂತ ನಿಯತ್ತಿನಿಂದ ಪಾಲಿಸುತ್ತಿದ್ದ ತಾಯಿ–ತಂದೆ ಗುರುಗಳು ತಮ್ಮ ಜವಾಬ್ದಾರಿಗಳನ್ನು ಅಷ್ಟೇ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದಾರೆಯೇ ಎಂಬುದು ಮರುಚಿಂತನೆಗೊಳಪಡಬೇಕಾದ ವಿಚಾರ.

**ಮನೆಯೇ ಮೊದಲ ಪಾಠಶಾಲೆ :**

ಮಗುವೊಂದು ಹುಟ್ಟಿದ ತಕ್ಷಣ ತನ್ನ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿಕೊಂಡು ಬೆಳೆಯುತ್ತದೆ. ಹಿರಿಯರು ಏನೆಲ್ಲಾ ಮಾಡುತ್ತಾರೋ ಅವನ್ನೆಲ್ಲ ಅನುಕರಿಸುತ್ತದೆ. ಅನುಕರಣೆಯ ಮೂಲಕ ಪ್ರಾಥಮಿಕ ಹಂತದ ಬೆಳವಣಿಗೆಯನ್ನು ಹೊಂದುವಂತಹ ಅದ್ಭುತ ಶಕ್ತಿ ಮಗುವಿನದ್ದು. ಆದ್ದರಿಂದ ಒಂದು ಮನೆಯಲ್ಲಿ ಹಿರಿಯರ ನಡೆ-ನುಡಿ, ಸ್ವಭಾವಗಳು ಇಲ್ಲಿ ಬಹಳ ಮುಖ್ಯ. ಮಗುವಿನ ತಾಯಿ-ತಂದೆಯಾಗಲಿ, ಇತರರಾಗಲಿ, ಸಿಟ್ಟು-ಜಗಳ ಮಾಡಿಕೊಳ್ಳದೆ ಪರಸ್ಪರ ಮೈತ್ರಿಯಿಂದ, ಶಾಂತಿ-ಪ್ರೀತಿಗಳ ಮೂಲಕ ಮನೆಯೊಳಗೆ ನೆಮ್ಮದಿಯ ವಾತಾವರಣವನ್ನು ಕಾಪಾಡಿಕೊಂಡು ಬಂದರೆ ಮಗುವೂ ಮುಂದೆ ಸಾತ್ವಿಕ ಗುಣಗಳನ್ನು ಬೆಳೆಸಿಕೊಳ್ಳುತ್ತದೆ. ಬೈಗುಳ, ಹೊಡೆದಾಟ, ಹಿಂಸೆ ಕ್ರೌರ್ಯಗಳನ್ನು ನೋಡುತ್ತಾ ಬೆಳೆಯುವ ಮಗು ಮುಂದೆ ಒಬ್ಬ ಕೊಲೆಗಾರನೋ, ದರೋಡೆಕೋರನೋ ಆಗಬಹುದು. ಅಷ್ಟೇ ಏಕೆ, ದೂರದರ್ಶನ ಸಿನಿಮಾಗಳಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ, ರಕ್ತಪಾತಗಳನ್ನು ನೋಡುವ ಮಕ್ಕಳು ಮುಂದೆ ತಾವೇನು ಮಾಡುತ್ತಿದ್ದೇವೆಂಬ ಪರಿವೆಯಿಲ್ಲದೆ ಅಂತಹ ಅಪರಾಧಗಳನ್ನು ಮಾಡಿ ಸಮಾಜಕ್ಕೆ ಕಂಟಕರಾದ ಉದಾಹರಣೆಗಳು ಬೇಕಾದಷ್ಟು ಇವೆ.

**ಶಿಕ್ಷಕ ವ್ಯಕ್ತಿತ್ವ ನಿರ್ಮಾಣದ ಶಿಲ್ಪಿ :**

ನಮ್ಮ ಮಕ್ಕಳಲ್ಲಿ ಎಳವೆಯಲ್ಲೇ ಸತ್ಯ, ನ್ಯಾಯ, ನಿಷ್ಠೆ, ಶಿಸ್ತು, ಧೈರ್ಯ, ಆತ್ಮವಿಶ್ವಾಸಗಳಂತಹ ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆ ನೀಡಬೇಕು. ಕಳ್ಳತನ, ಸುಳ್ಳು ಹೇಳುವುದು, ಮೋಸ, ವಂಚನೆ, ಇತರರನ್ನು ಗೇಲಿ ಮಾಡಿ ನಗುವುದು ಇವೆಲ್ಲವೂ ಮುಂದೆ ಸಮಾಜಕ್ಕೆ ಕಂಟಕವಾಗಬಲ್ಲಂತಹ ಗುಣಗಳು. ಮನೆಯಲ್ಲಿ ಕಲಿಯದೇ ಇರುವ ಇಂತಹ ಗುಣಗಳನ್ನು ಮಕ್ಕಳು ಶಾಲೆಯಲ್ಲಿ ಸಂಗದೋಷದಿಂದ ಕಲಿಯುತ್ತಾರೆ. ಈ ಹಂತದಲ್ಲಿ ಅವರನ್ನು ಸರಿಯಾಗಿ ನೋಡಿಕೊಳ್ಳುವ ಜವಾಬ್ದಾರಿ ದೈವ ಸಮಾನರಾದ ಗುರುಗಳದ್ದು. ಆದರೆ ಇವತ್ತು ಅನೇಕ ಕಾರಣಗಳಿಂದಾಗಿ ಶಾಲೆಗಳಲ್ಲಿ ಕಲಿಸುವ ಗುರುಗಳಲ್ಲಿ ತಾಳ್ಮೆ,ಸಹನೆ, ಕರುಣೆಗಳು ಕಾಣುತ್ತಿಲ್ಲ. ಮಕ್ಕಳ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಬೇಕೆಂಬ ಧ್ಯೇಯ ಅವರಲ್ಲಿ ಇರುವುದಿಲ್ಲ. ಪ್ರತಿಯೊಂದು ಕ್ಷುಲ್ಲಕ ಕಾರಣಗಳಿಗೂ ಮಕ್ಕಳನ್ನು ಬೈದು, ಹೊಡೆದು, ಅವಮಾನಿಸುವ, ಪಕ್ಷಪಾತ ಮಾಡಿ ಮಕ್ಕಳ ಮನನೋಯಿಸುವ ಸಂಕುಚಿತ ಮನೋಭಾವದ ಗುರುಗಳ ಸಂಖ್ಯೆ ಬೆಳೆಯುತ್ತಿದೆ. ಗುರುಗಳ ಸ್ಥಾನದಲ್ಲಿದ್ದವರು ತಮ್ಮಲ್ಲಿ ಉದಾತ್ತ ಗುಣಗಳನ್ನು ಮತ್ತು ವಿಶಾಲಮನೋಭಾವನೆಯನ್ನು ಬೆಳೆಸಿಕೊಳ್ಳದೇ ಇದ್ದರೆ ಒಂದು ಉತ್ತಮ ಸಮಾಜದ ನಿರ್ಮಾಣ ಸಾಧ್ಯ.

**ಅರಳುವ ಮುನ್ನವೇ ಬಾಡುತ್ತದೆ :**

ಇಂದು ಕಾಲ ಬದಲಾಗಿದೆ. ಹಿಂದೆ ಇದ್ದ ಹಾಗೆ ಸ್ತ್ರೀ-ಪುರುಷರ ನಡುವೆ ಅಸಮಾನತೆ, ತಾರತಮ್ಯ ಧೋರಣೆಗಳು ಇಂದು ಇಲ್ಲ. ಸ್ತ್ರೀಯರಿಗೂ ಪುರುಷರ ಹಾಗೆ ಒಂದು ಮನಸ್ಸಿದೆ. ಆಸೆ-ಆಕಾಂಕ್ಷೆಗಳಿವೆ, ಸ್ವಂತ ವ್ಯಕ್ತಿತ್ವವಿದೆ, ಆದ್ದರಿಂದ ಸಮಾಜದಲ್ಲಿ ಅವರಿಗೂ ಸಮಾನವಾದ ಅವಕಾಶಗಳು ಸಿಗಬೇಕು ಎಂದು ವಾದಿಸುತ್ತಿರುವ ಕಾಲವಿದು. ಎಷ್ಟೋ ಕುಟುಂಬಗಳಲ್ಲಿ ಗಂಡ-ಹೆಂಡತಿಯರಿಬ್ಬರು ಹೊರಗೆ ಹೋಗಿ ದುಡಿದು ಹಣ ಸಂಪಾದಿಸುತ್ತಾರೆ. ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಸ್ತ್ರೀಯೂ ಸಕ್ರಿಯ ಪಾತ್ರವಹಿಸುತ್ತಾಳೆ. ಹಿಂದಿನ ಕಾಲದಲ್ಲಿ ಶ್ರಮವಿಭಜನೆಯ ಪ್ರಶ್ನೆ ಬಂದಾಗ ಪುರುಷ ಮನೆಯ ಹೊರಗೆ ದುಡಿದು ಹಣಸಂಪಾದನೆ ಮಾಡಿದರೆ ಮನೆ-ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಸ್ತ್ರೀಯ ಮೇಲಿತ್ತು.

ನ್ಯಾಯವಾಗಿ ಹೇಳುವುದಾದರೆ ಇಂದು ಪುರುಷ ಮನೆಗೆಲಸ ಮಕ್ಕಳನ್ನು ನೋಡಿಕೊಳ್ಳುವ ಕೆಲಸದಲ್ಲಿ ಹೆಂಡತಿಯೊಂದಿಗೆ ಸಮಪಾಲು ತೆಗೆದುಕೊಳ್ಳಬೇಕು. ಆದರೆ ಈ ವಿಚಾರದಲ್ಲಿ ಸಂಪ್ರದಾಯದ ಚೌಕಟ್ಟಿಗೆ ಅಂಟಿಕೊಂಡಿರುವುದೇ ಆರಾಮವೆಂದು ತಿಳಿಯುವ ಪುರುಷರು ಹೆಂಗಸರು ಮಾಡಬೇಕಾದ ಕೆಲಸವನ್ನು ತಾವು ಮಾಡುವುದು ತಮ್ಮ 'ಯಜಮಾನ್ಯ'ದ ಪ್ರತಿಷ್ಠೆಗೆ ಕುಂದು ಎಂದು ತಿಳಿದುಕೊಂಡು ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾರೆ. ಪರಿಣಾಮವಾಗಿ ತಾಯಿಯೊಬ್ಬಳೇ ಎಲ್ಲವನ್ನೂ ಕಷ್ಟಪಟ್ಟು ನಿಭಾಯಿಸಬೇಕಾಗುತ್ತದೆ. ಈ ಅನ್ಯಾಯವು ಎಷ್ಟೋ ಬಾರಿ ಸ್ತ್ರೀಯರಲ್ಲಿ ಆಕ್ರೋಶವನ್ನು ಹುಟ್ಟಿಸಿ, ಅದು ಬೇರೆ ರೀತಿಯಲ್ಲಿ ವ್ಯಕ್ತವಾಗಿ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇದೆ. ಎಷ್ಟೋ ಮಂದಿ ಪುರುಷರು ಈ ಬಗ್ಗೆ ಯೋಚಿಸುವುದಿಲ್ಲ.

ವಿದ್ಯಾವಂತರು, ಮುಂದುವರಿದವರು ಎಂದು ಹೇಳಿಕೊಳ್ಳುವವರು ಸಹ ವೇದಿಕೆಯ ಮೇಲಿನ ಭಾಷಣಗಳಲ್ಲಿ 'ಮಕ್ಕಳ ವ್ಯಕ್ತಿತ್ವವನ್ನು' ರೂಪಿಸುವ ಹೊಣೆಗಾರಿಕೆ ಮಾತೆಯರದ್ದು ಎಂದು ಸಾರಾಸಗಟಾಗಿ ಹೇಳುವುದನ್ನು ನಾನು ಕೇಳಿದ್ದೇನೆ. ಇದು ಖಂಡಿತವಾಗಿಯೂ ಸರಿಯಲ್ಲ. ಮಕ್ಕಳ ಭವಿಷ್ಯವನ್ನು ರೂಪಿಸುವ ವಿಚಾರದಲ್ಲಿ ಪ್ರತಿಯೊಂದು ಕುಟುಂಬದಲ್ಲೂ ತಂದೆಯರು ಕೂಡಾ ಸಮಪ್ರಮಾಣದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು ಬಹಳ ಮುಖ್ಯ.

ಮಕ್ಕಳ ದೈಹಿಕ ಹಾಗೂ ಮಾನಸಿಕವಾದ ಆರೋಗ್ಯಕರ ಬೆಳವಣಿಗೆಗೆ ಮುಖ್ಯವಾಗಿ ಬೇಕಾದುದು ತಾಯಿ-ತಂದೆಯವರ ನಿಸ್ವಾರ್ಥ ಪ್ರೀತಿ. ಅವರ ಆರೈಕೆ ಹಾಗೂ ಅವರ ಅಗತ್ಯಗಳನ್ನು ಪೂರೈಸುವ ಹೊಣೆಗಾರಿಕೆಯ ವಿಚಾರದಲ್ಲಿ ಚರ್ಚೆ-ಜಗಳಗಳು ನಡೆದರೆ ಅರಳಬೇಕಾದ ಅವರ ಮನಸ್ಸು ಮುದುಡಿಕೊಳ್ಳುತ್ತದೆ. ಹಾಗಾಗದಂತೆ ಎಚ್ಚರಿಕೆ ವಹಿಸಬೇಕು. ಇಬ್ಬರೂ ಸೇರಿ ಜೊತೆಯಾಗಿ ವಿಚಾರಮಾಡಿ, ಮಕ್ಕಳಲ್ಲಿ ಜೀವನ ಮೌಲ್ಯಗಳ ಬಗೆಗಿನ ಅರಿವು ಮೂಡಿಸಿ, ಅವರು ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾಡಿದರೆ ಅವರ ವ್ಯಕ್ತಿತ್ವ ವಿಕಾಸವಾಗುತ್ತದೆ. ಹಾಗೂ ಅವರು ಬೆಳೆದಂತೆ ಅವರಲ್ಲಿ ಸಾಮಾಜಿಕ ಅರಿವು, ದೇಶಪ್ರೇಮ, ನೈತಿಕ ಪ್ರಜ್ಞೆಗಳು ಮೂಡಿ ಅವರು ಸಮಾಜದ ಉತ್ತಮ ಪ್ರಜೆಗಳಾಗುತ್ತಾರೆ. ಜನಹಿತಕಾರಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಒಂದು ಆದರ್ಶ ಸಮಾಜದ ನಿರ್ಮಾಣದಲ್ಲಿ ಭಾಗಿಗಳಾಗುತ್ತಾರೆ.

Sarayu Kannada Monthly Published by Narayana Somayaji on behalf of Sri Rama Vidyakendra Kalladka, Bantwal Tq, D.K. and printed at Anagha Digital Square, Kaikamba, B.C. Road.

BOOK POST

ಸವಿಧೇ,